ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ

ಬನವಾಸಿ ರಸ್ತೆ, ಶಿರಸಿ


# ಭತ್ತದ ರೋಗಗಳು ಹಾಗೂ ಅವುಗಳ ನಿರ್ವಹಣೆ

## ಬೆಂಕಿ ರೋಗ





ಎಲೆಯ ಮೇಲೆ ಚಿಕ್ಕ ಕಂದು ಬಣ್ಣದ ಚುಕ್ಕೆಗಳು ಕಂಡುಬರುತ್ತವೆ. ಮಚ್ಚೆಗಳ ಸಂಖ್ಯೆ ಹೆಚ್ಚಾದಂತೆಲ್ಲ ಇಡೀ ಸಸ್ಯವೇ ಒಣಗಿ ಬೆಳೆಯು ಬೆಂಕಿಯಿಂದ ಸುಟ್ಟಂತೆ ಕಾಣುತ್ತದೆ. ತೆನೆ ಮುರಿದು ನೇತಾಡತೊಡಗುತ್ತದೆ. ಬಾಧೆಗೊಳಗಾದ ಕಾಳುಗಳು ಜೊಳ್ಳಾಗುತ್ತವೆ.

### ನಿರ್ವಹಣೆ.



- ಪ್ರತಿ ಕಿಲೋ ಬೀಜಕ್ಕೆ 2.0 ಗ್ರಾಂ ಕಾರ್ಬೆಂಡೈಜಿಮ್ ಬೀಜೋಪಚಾರ ಮಾಡಿ ಬಿತ್ತಬೇಕು.
- ಪ್ರತಿ ಲೀಟರ್ ನೀರಿಗೆ ಕಾರ್ಬಂಡೈಜಿಮ್ 1.0 ಗ್ರಾಂ ನಂತೆ ಅಥವಾ ಎಡಿಫಿನ್‌ಪಾಸ್ 1 ಮೀ. ಲೀ. ಅಥವಾ 0.6 ಗ್ರಾಂ. ಟ್ರೈಸೈಕ್ಲೋಜೋಲ್ ಬೆರೆಸಿ ಸಿಂಪಡಿಸಬೇಕು



## ಎಲೆ ಕವಚದ ಮಚ್ಚೆರೋಗ

ಎಲೆ ಹೊದಿಕೆಯ ಮೇಲೆ ಒಂದು ಅಥವಾ ಅನೇಕ ಅಂಡಾಕಾರದ ಚುಕ್ಕೆಗಳನ್ನು ಕಾಣಬಹುದು. ಇಂತಹ ಚುಕ್ಕೆಯ  ಕೇಂದ್ರ ಭಾಗವು ಬೂದಿ ಮಿಶ್ರಿತ ಬಿಳಿ ಬಣ್ಣದಿಂದ ಕೂಡಿದ್ದು, ಕಂದು ಬಣ್ಣದ ಉಂಗುರದಿಂದ ಆವೃತವಾಗಿರುತ್ತದೆ. ರೋಗವು ತೀವ್ರವಾಗಿರುವಾಗ ಎಲ್ಲಾ ಎಲೆಗಳು ಒಣಗಬಹುದು.

### ನಿರ್ವಹಣೆ:

- ರೋಗದ ಲಕ್ಷಣಗಳು ಕಂಡು ಬಂದ ತಕ್ಷಣ ಕಾರ್ಬಂಡೈಜಿಮ್ (1 ಗ್ರಾಂ./ ಲೀಟರ್) ಅಥವಾ ಮ್ಯಾಂಕೋಜೆಬ್ (2 ಗ್ರಾಂ/ಲೀಟರ್) ಅಥವಾ ಹೆಕ್ಸಾಕೊನಾಜೊಲ್ (1 ಮಿ. ಲಿ./ಲೀ) ಸಿಂಪಡಿಸಬೇಕು.

## ಊದುಬತ್ತಿ ರೋಗ



ಬಾಧೆಗೊಳಗಾದ ಸಸ್ಯಗಳಲ್ಲಿ ತೆನೆಯ ಬದಲು ಉದುಬತ್ತಿಯಂತೆ ಕಾಣುವ ಬೂದು ಬಣ್ಣದ ಕಡ್ಡಿ ಹೊರಬರುತ್ತದೆ. ಆರಂಭದಲ್ಲಿ ಈ ಕಡ್ಡಿಗಳು ಬೆಳ್ಳಿಯಂತೆ ಹೊಳೆಯುತ್ತಿರುತ್ತವೆ. ಅನಂತರ, ಇವು ಮಾಸಲು ಬಣ್ಣಕ್ಕೆ ತಿರುಗುತ್ತವೆ.

## ಕಾಡಿಗೆ ರೋಗ

ರೋಗಕ್ಕೆ ತುತ್ತಾದ ಕಾಳುಗಳು ಹಳದಿ ಅಥವಾ ದಟ್ಟ ಹಸಿರು ಬಣ್ಣದ ವೆಲ್ವೆಟ್ ಉಂಡೆಗಳಾಗಿ ಮಾರ್ಪಾಡಾಗುತ್ತವೆ.

### ಊದುಬತ್ತಿ ಮತ್ತು ಕಾಡಿಗೆ ರೋಗಗಳ ನಿರ್ವಹಣೆ



- ಬಿತ್ತನೆ ಬೀಜವನ್ನು ರೋಗವಿಲ್ಲದಂತಹ ಪ್ರದೇಶಗಳಿಂದ ಸಂಗ್ರಹಿಸಿ ಬಿತ್ತನೆ ಮಾಡಬೇಕು.
- ಬೀಜವನ್ನು ಬಿತ್ತುವುದಕ್ಕೆ ಮೊದಲು $52^{0}$ ಸೆ. ಉಷ್ಣಾಂಶವಿರುವ ಬಿಸಿ ನೀರಿನಲ್ಲಿ 10 ನಿಮಿಷ ನೆನಸಿ, ಒಣಗಿಸಿ ಬಿತ್ತಬೇಕು. ಉಷ್ಣಾಂಶವು ಅತಿಯಾದರೆ ಬೀಜಕ್ಕೆ ಅಪಾಯವಾಗುವುದು ಎಂಬುದನ್ನು ಗಮನದಲ್ಲಿಡಬೇಕು.
- ಗದ್ದೆಯಲ್ಲಿ ರೋಗವನ್ನು ಕಂಡ ತಕ್ಷಣ ಅಂತಹ ತೆನೆಗಳನ್ನು ತೆಗೆದು ಸುಟ್ಟು ಹಾಕಬೇಕು.